**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ.274/2018**

| | | | |
|---|---|---|---|
| **ಹೆಸರು** | **:** | **ಅಮರನಾಥ** | **ದೋ.ಸಾ. 5** |
| **ತಂದೆಯ ಹೆಸರು** | **:** | **ನಾಗರಾಜ** | **ಪ್ರಾ.ಸಾ. 4** |
| **ವಯಸ್ಸು** | **:** | **33 ವರ್ಷ** | **ದಿನಾಂಕಃ 05-07-2023** |
| **ಉದ್ಯೋಗ** | **:** | **ಬ್ಯಾಂಕ ಮ್ಯಾನೇಜರ್** | |
| **ವಾಸಸ್ಥಳ** | **:** | **ಗುಲ್ಬರ್ಗಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನಾನು 2014 ರಿಂದ 2017 ರವರೆಗೆ ನಾನು ಚಿಂಚೋಳಿಯ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕನಲ್ಲಿ ಸಹಾಯಕ ವ್ಯವಸ್ಥಾಪಕನಾಗಿ ಕೆಲಸ ಮಾಡಿದ್ದೇನೆ.

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-4 ಮತ್ತು ಬದ್ರಿನಾರಾಯಣ ಎಂಬುವವರು ಗೊತ್ತು. ಸದರಿಯವರು ನನ್ನ ಸಹದ್ಯೋಗಿಗಳು.

ಈಗ ನನಗೆ ತೋರಿಸಲಾದ ದಾಖಲೆಯಲ್ಲಿರುವ ಸಹಿ ನನ್ನದೇ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು ಈಗ ನಿಪಿ-7 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಫೇಬ್ರುವರಿ-2015 ರಲ್ಲಿ ಒಂದು ದಿನ ಪೊಲೀಸರು ಚಿಂಚೋಳಿಯ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ ಶಾಕೆಗೆ ಬಂದು ಸದರಿ ಶಾಖೆಯ ಅಂಕೌಂಟ್ ಆಫೀಸರ್ ಬದ್ರಿನಾರಾಯಣ ಎಂಬುವವರು ಹಾಜರು ಪಡಿಸಿದ ಎರಡು ಮೂಲ ಚೆಕ್ಕುಗಳು, ಎರಡು ಜಮಾ ಚೀಟಿಗಳು ಮತ್ತು ಒಂದು ಸ್ಟೆಂಟಮೆಂಟ್ ಆಫ್ ಅಂಕೌಂಟ್ ದಾಖಲೆಯನ್ನು ಹಾಜರು ಪಡಿಸಿದ ಮೇರೆಗೆ ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಬ್ಯಾಂಕ ವಂಚನೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಜಪ್ತು ಮಾಡಿಕೊಂಡು ನಿಪಿ-7 ರ ದಾಖಲೆಗೆ ನನ್ನ ಮತ್ತು ಚಾಸಾ-4 ರವರ ಸಹಿ ಪಡೆದಿರುತ್ತಾರೆ. ಜಪ್ತು ಮಾಡಲಾದ ಚೆಕ್ಕುಗಳ ನಂಬರ ಈಗ ನೆನಪಿಲ್ಲ.

ಪಂಚನಾಮೆ ಕಾಲಕ್ಕೆ ಪೊಲೀಸರು ಜಪ್ತು ಮಾಡಿದ ದಾಖಲೆಗಳನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ತನಗೆ ತೋರಿಸಲಾದ ಎರಡು ಚೆಕ್ಕುಗಳು, ಎರಡು ಜಮಾ ಚೀಟಿಗಳು ಮತ್ತು

ಒಂದು ಸ್ಟೇಂಟಮೆಂಟ್ ಆಫ್ ಅಂಕೌಂಟ್ ದಾಖಲೆಯನ್ನು ನೋಡಿ ಗುರುತಿಸುತ್ತಾರೆ. ಆ ಪೈಕಿ ಎರಡು ಚೆಕ್ಕುಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿದೆ. ಎರಡು ಜಮಾ ಚೀಟಿಗಳನ್ನು ಈಗ ಕ್ರಮವಾಗಿ ನಿಪಿ-8 ಮತ್ತು 9 ಮತ್ತು ಸ್ಟೇಂಟಮೆಂಟ್ ಆಫ್ ಅಂಕೌಂಟ್ ದಾಖಲೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಬಿ.ವಿ. ವಕೀಲರಿಂದಃ</u>**

ಫೇಬ್ರುವರಿ-2015 ರಲ್ಲಿ ಪೊಲೀಸರು ನನ್ನ ಮುಂದೆ ನಿಪಿ-7 ರ ಪಂಚನಾಮೆ ಬರೆದು ನಿಪಿ-2,3 ಮತ್ತು 8 ರಿಂದ 10 ರ ದಾಖಲೆಗಳನ್ನು ಜಪ್ತು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-7 ರ ಪಂಚನಾಮೆ ಬರೆಯುವಾಗ ಸಮಯ ಎಷ್ಟಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಮಧ್ಯಾಹ್ನ 12 ರ ನಂತರ ಬರೆಯಲಾಗಿತ್ತು, ನಿಖರವಾದ ಸಮಯ ನೆನಪಿಲ್ಲ ಎನ್ನುತ್ತಾರೆ. ಸದರಿ ಪಂಚನಾಮೆಯನ್ನು ಬರೆದು ಮುಗಿಸಲು ಸುಮಾರು ಒಂದು ತಾಸು ಬೇಕಾಯಿತು.

ನಿಪಿ-7 ರ ದಾಖಲೆಯಲ್ಲಿ ಏನು ಬರೆದಿದೆ ಗೊತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ದಾಖಲೆಗಳನ್ನು ಜಪ್ತು ಮಾಡಿದ ಬಗ್ಗೆ ಬರೆದಿದ್ದಾರೆ ಈಗ ಅಷ್ಟಾಗಿ ನೆನಪಿಲ್ಲ ಎನ್ನುತ್ತಾರೆ. ನಿಪಿ-2 ಮತ್ತು 3 ರ ಚೆಕ್ಕುಗಳ ಮೇಲೆ ಯಾವ ದಿನಾಂಕ ನಮೂದಾಗಿತ್ತು ಮತ್ತು ಸದರಿ ಚೆಕ್ಕುಗಳ ಎಷ್ಟು ಮೊತ್ತದಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಯಾವ ದಿನಾಂಕ ನಮೂದಾಗಿತ್ತು ಎಂದು ನೆನಪಿಲ್ಲ ಆದರೆ ಎರಡು ಚೆಕ್ಕುಗಳು ರೂ.40,000/- ಗೂ ಹೆಚ್ಚಿನ ಮೌಲ್ಯದಾಗಿತ್ತು ಎನ್ನುತ್ತಾರೆ. ನಿಪಿ-8 ಮತ್ತು 9 ರ ಜಮಾ ಚೀಟಿಗಳ ಮೇಲೆ ಯಾವ ದಿನಾಂಕ ನಮೂದಾಗಿತ್ತು ಮತ್ತು ಸದರಿ ಚೀಟಿಗಳು ಎಷ್ಟು ಮೊತ್ತದಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಯಾವ ದಿನಾಂಕ ನಮೂದಾಗಿತ್ತು ಎಂದು ನೆನಪಿಲ್ಲ ಆದರೆ ಎರಡು ಚೀಟಿಗಳ ಪೈಕಿ ಒಂದು ರೂ.30000/- ಮತ್ತೊಂದು ರೂ.40,000/- ಮೊತ್ತಕ್ಕೆ ಸಂಬಂಧಿಸಿತ್ತು ಎನ್ನುತ್ತಾರೆ. ನಿಪಿ-10 ರ ದಾಖಲೆ ಯಾವ ಬ್ಯಾಂಕ ಖಾತಾ ನಂಬರಗೆ ಸಂಬಂಧಿಸಿದ್ದು ಎಂದು ನನಗೆ ನೆನಪಿಲ್ಲ.

ಈ ಪ್ರಕರಣದ ಸಂಬಂಧ ನನಗೇನು ಗೊತ್ತಿಲ್ಲದಿದ್ದರು ಚಾಸಾ-1, ನನ್ನ ಮೇಲಾಧಿಕಾರಿಗಳು ಮತ್ತು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿರುವುದೇಲ್ಲಾ ಸುಳ್ಳು -

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**